# ಕುಸುರಿ ಶೈಲಿಯ ಬೊಹೆಮಿಯ

■ ರೂಪಾ ಕೆ.ಎಂ.

ಕೈಯಿಂದ ಮಾಡಿದ ಕುಸುರಿ ಕಲೆಯ ಹಿಂದೆ ಪ್ರೀತಿ, ಕಾಳಜಿ, ಕೌಶಲವೂ ಅಡಗಿರುತ್ತದೆ. ಈ ಕುಸುರಿ ಆಭರಣಗಳೆಂದರೆ ಯಾರಿಗೆ ತಾನೇ ಇಷ್ಟ ಆಗಲ್ಲ? ಅಂಥ 'ಕುಸುರಿ ಕಲೆ'ಯಲ್ಲಿ ಸದ್ಯಕ್ಕೆ ಟ್ರೆಂಡ್‌ನಲ್ಲಿರುವುದು 'ಬೊಹೆಮಿಯ' ಶೈಲಿಯ ಆಭರಣಗಳು. ಇರುವ ವಸ್ತುಗಳನ್ನೇ ಬಳಸಿ, ಅದನ್ನು ಆಧುನಿಕ ಶೈಲಿಯಲ್ಲಿ ಒಪ್ಪುವಂತೆ ನೀಡಲಾಗುತ್ತದೆ.

ಪರಿಸರಸ್ನೇಹಿ ಹಾಗೂ ಸುಸ್ಥಿರತೆಯ ಧ್ಯೇಯವನ್ನು ಇಟ್ಟುಕೊಂಡು ಬೊಹೆಮಿಯ ಆಭರಣಗಳನ್ನು ತಯಾರಿಸಲಾಗುತ್ತದೆ. 2025ರ 'ಬೊಹೊ ಚಿಕ್' ಎನ್ನುವ ಫ್ಯಾಷನ್ ಮಂತ್ರ ಬಹಳ ಜನಪ್ರಿಯವಾಗಿದೆ. ಆಭರಣ ಹಾಗೂ ಬಟ್ಟೆಗಳ ಆಯ್ಕೆಯಲ್ಲಿ ಬೊಹೊ ಚಿಕ್ ಮಾದರಿಯನ್ನು ಅನುಸರಿಸಲಾಗುತ್ತದೆ. ಬೊಹೊ ಚಿಕ್ ಎಂದರೆ ಆತ್ಮಾನುಸಂಧಾನಕ್ಕೆ ಕಲಾತ್ಮಕ ಚೌಕಟ್ಟು ಎಂಬರ್ಥವನ್ನು ಧ್ವನಿಸುತ್ತದೆ. ಏನನ್ನಾದರೂ ಧರಿಸಿ ಆದರೆ, ಹೊಳೆಯುತ್ತಲೇ ಇರಿ ಥೇಟ್ ಬಾನಿನಲ್ಲಿರುವ ನಸುಕಿನ ನಕ್ಷತ್ರಗಳಂತೆ!

## ಟ್ರೆಂಡಿಂಗ್‌ನಲ್ಲಿರುವ ಆಭರಣಗಳು

ಸಮುದ್ರದ ಅಲೆಯಂತೆ ಕಾಣುವ ಲೇಯರ್ಡ್ ನೆಕ್ಲೇಸ್‌ಗಳು ಬೊಹೊ ಟ್ರೆಂಡ್ ಆಗಿವೆ. ಲೇಯರ್ಡ್ ನೆಕ್ಲೇಸ್‌ಗಳು ಉಡುಪಿಗೆ ಪರಿಪೂರ್ಣತೆಯನ್ನು ತಂದುಕೊಡುತ್ತವೆ. ಸೀರೆ, ಕುರ್ತಾ ಮತ್ತು ಇಂಡೊಫ್ಯಾಷನ್ ಹಾಗೂ ಫ್ಯೂಷನ್ ಬಗೆಯ ಬಟ್ಟೆ ಅಥವಾ ಸರಳವಾದ ಶರ್ಟ್‌ಗಳಿಗೂ, ಲಿನಿನ್ ಉಡುಗೆಗೂ ಲೇಯರ್ಡ್ ನೆಕ್ಲೇಸ್‌ಗಳು ಚಂದಗೆ ಒಪ್ಪುತ್ತವೆ. ಬಿಳಿ ಬಣ್ಣದ ಶರ್ಟಿಗೆ ಬೆಳ್ಳಿ ಮತ್ತು ಬಂಗಾರದ ಬಣ್ಣ ಲೇಯರ್ಡ್ ನೆಕ್ಲೇಸ್ ಧರಿಸಿ, ಹೆಚ್ಚು ಆಕರ್ಷಕವಾಗಿ ಕಾಣಿಸಿಕೊಳ್ಳಬಹುದು.

ಲೋಹಗಳೇ ಇರಲಿ, ಬೀಡೆಡ್‌ಗಳೇ ಇರಲಿ; ದೊಡ್ಡ ಪೆಂಡೆಂಟ್, ಸಣ್ಣ ಸಣ್ಣ ಇನ್‌ವಿಸಿಬಲ್ ಪೆಂಡೆಂಟ್‌ಗಳು ಹೆಚ್ಚಾಗಿ ಬೊಹೊ ಲೇಯರ್ಡ್ ನೆಕ್ಲೇಸ್‌ನಲ್ಲಿ ನೋಡಬಹುದು. ಕಪ್ಪುದಾರಕ್ಕೆ ಅಲ್ಲಲ್ಲಿ ಚಿಪ್ಪಿನ ಪೆಂಡೆಂಟ್‌ಗಳಿರುವ ಲೇಯರ್ಡ್ ನೆಕ್ಲೇಸ್ ಸದ್ಯಕ್ಕೆ ಕಣ್ಮನ ಸೆಳೆಯುತ್ತದೆ.

ಹಳೆಯ ನಾಣ್ಯ, ಕಚ್ಚಾ ಕಲ್ಲು ಹಾಗೂ ಮರದ ತುಂಡುಗಳಂಥ ನೈಸರ್ಗಿಕ ಪರಿಕರಗಳನ್ನು ಬಳಸಿ ಮಾಡಿದ ಹಗುರವಾದ ಚೋಕರ್ ಹಾಗೂ ಸಣ್ಣ ಹಾರವು ಈಗ ಯುವಮನಸ್ಸನ್ನು ಸೆಳೆಯುತ್ತವೆ. ಸರಪಳಿಯ ವಿನ್ಯಾಸವೇ ಇದ್ದರೂ, ಪೆಂಡೆಂಟ್‌ಗಳ ಆಕಾರವನ್ನು ಅದಕ್ಕೆ ತಕ್ಕಂತೆ ಬದಲಾಯಿಸಿದರೆ 'ಬೊಹೊ' ಟಚ್‌ಅಪ್ ಸಿಕ್ಕಿದಂತೆ ಆಗುತ್ತದೆ. ಅತಿಯಾಗಿ ಹೊಳಪು ನೀಡದೇ ಸಹಜವಾಗಿರುವ ಲೋಹದ ಕತ್ತಿನ ಕಡಗಗಳು, ಹಾವು, ಚೇಳು ಒಟ್ಟಿಗೆ ಇರುವಂತೆ ಕಾಣುವ ವಿನ್ಯಾಸದ ಕಿವಿಯೋಲೆಗಳು ಆಕರ್ಷಕ ಎನಿಸಿವೆ.

ಬರೀ ಲೋಹದಿಂದ ಮಾಡಿದ ಕಡಗಗಳು, ಕಿವಿಯೋಲೆಗಳು, ಹೇರ್‌ಬನ್, ಹೆಡ್‌ಗೇರ್, ರಿಂಗ್‌ಗಳು ಈಗೀಗ ಆಕ್ಸೆಸರಿಸ್‌ನಲ್ಲಿ ಜಾಗ ಪಡೆದಿವೆ.

ಕಪ್ಪೆಚಿಪ್ಪು ಮತ್ತು ಮುತ್ತಿನ ಪರಿಕರಗಳಿಂದ ರೂಪಿಸಿದ ಆಭರಣಗಳು ತುಸು ಹೆಚ್ಚೇ ನಾಜೂಕಿನ ಕುಸುರಿ ಕಲೆಯನ್ನು ಬೇಡುತ್ತವೆ. 'ಬೊಹೊ' ವೈಬ್‌ಗಾಗಿ ಶೆಲ್ ಆ್ಯಕ್ಲೆಂಟ್‌ಗಳನ್ನು ಧರಿಸಲು ಪ್ರಯತ್ನಿಸಿ. ಬೇಸಿಗೆಯಲ್ಲಿ ಕಡಲತೀರಕ್ಕೆ ಭೇಟಿ ನೀಡುವಾಗ 'ಬೀಚ್ ಡ್ರೆಸ್'ಗೆ ಈ ಶೆಲ್ ನೆಕ್ಲೇಸ್‌ಗಳು ಚೆನ್ನಾಗಿ ಹೊಂದುತ್ತವೆ. ಕ್ರೋಶೆ ಟಾಪ್ ಧರಿಸಿದ್ದರೆ ಮುತ್ತಿನ ಡ್ರಾಪ್ ಕಿವಿಯೋಲೆಗಳನ್ನು ಬಳಸಬಹುದು.



ಬೀಡ್ಸ್ ಮತ್ತು ಕನ್ನಡಿಯನ್ನು ಬಳಸಿ ಮಾಡಿದ ಉದ್ದನೆಯ ಕಿವಿಯೋಲೆಗಳು ಸೃಜನಶೀಲತೆಯ ಪ್ರತೀಕ ಎನಿಸಿವೆ. ಗಾತ್ರ, ಆಕಾರ, ಟೆಕ್ಸ್‌ಚರ್‌ಗಳಲ್ಲಿ ವಿಭಿನ್ನತೆ ತಂದು ವಿನ್ಯಾಸ ಮಾಡಿದ ಹಗುರ ಎನಿಸುವ ಕಿವಿಯೋಲೆಗಳನ್ನು ಸರ್ವಸ್ವತಂತ್ರದ ದ್ಯೋತಕವಾಗಿಯೂ ನೋಡಲಾಗುತ್ತದೆ.

ಮಂಡಲ ಪೆಂಡೆಂಟ್, ಅದಕ್ಕೆ ಹೊಂದಿಕೆಯಾಗುವ ಕಿವಿಯೋಲೆಗಳು, ಕಫ್ ಇರುವ ಸೂಕ್ಷ್ಮ ಹಾರವನ್ನು ಆಯ್ಕೆ ಮಾಡಿಕೊಳ್ಳಬಹುದು. ಹೂಪ್‌ನೊಂದಿಗೆ ಟಸೆಲ್ ಕಿವಿಯೋಲೆಯನ್ನು ಧರಿಸಬಹುದು. ಒಂದು ಕಿವಿಯಲ್ಲಿ ಒಂದು ಸ್ಟಡ್ ಇರುವ ಕಿವಿಯೋಲೆ ಇದ್ದರೆ, ಇನ್ನೊಂದು ಕಿವಿಯಲ್ಲಿ ಉದ್ದವಾದ ಗರಿ ಕಿವಿಯೋಲೆಯನ್ನು ಹಾಕಬಹುದು. ದೊಡ್ಡ ರತ್ನದ ಉಂಗುರ ಅಥವಾ ವಿವರವಾದ ಕಫ್ ಬ್ರೇಸ್‌ಲೆಟ್ ಎದ್ದು ಕಾಣುತ್ತದೆ. ಲೀಫ್ ಇಯರ್ ಕಫ್, ರೌಂಡ್ ಮಂಡಲ ಇಯರ್ ಕಫ್, ಮೂನ್‌ಸ್ಟೋನ್ ಕ್ರೆಸೆಂಟ್ ರಿಂಗ್, ಸೂಕ್ಷ್ಮಕೆತ್ತನೆ ಇರುವ ತಾಮ್ರದ ಕಡಗ, ರೂಬಿ ರಾಕ್ ಹೇರ್ ಬನ್, ಕ್ಲಿಯೋಪಾತ್ರ ಆರ್ಮ್ ಕಫ್‌ಗಳನ್ನು ತೊಟ್ಟು ಸಂಭ್ರಮಿಸುವವರ ಸಂಖ್ಯೆ ದೊಡ್ಡದಿದೆ.

ಬೊಹೊ ಬಳೆಗಳದ್ದೇ ಒಂದು ಬಗೆಯ ಕರಾಮತ್ತು. ರೆಸಿನ್ ಇರಲಿ, ಗಾಜಿನದ್ದೇ ಇರಲಿ, ಅವುಗಳ ಗಾತ್ರ ತುಸು ದೊಡ್ಡದೇ ಇರುತ್ತದೆ. ಗಾಜಿನ ಬಳೆಗಳ ಒಳಗೆ ಇಣುಕುವ ರೇಸಿನ್ ಆರ್ಟ್‌ಗಳು, ಬಣ್ಣದ ರೇಷ್ಮೆ ದಾರಗಳಲ್ಲಿ ಸುತ್ತಿದ ಬಳೆಗಳು, ಕವಡೆ ಹಾಗೂ ಕಪ್ಪೆಚಿಪ್ಪು ಬಳಸಿ ಮಾಡಿದ ಬಳೆಗಳು ಎಲ್ಲವನ್ನೂ ಒಟ್ಟಿಗೆ ಧರಿಸಿಯೂ 'ಬಹುಸಂಸ್ಕೃತಿ'ಯನ್ನು ಬಿಂಬಿಸುವಂತೆ ಮಾಡಬಹುದು. ಗಂಡು–ಹೆಣ್ಣಿನ ಮಿಲನದ ವಿನ್ಯಾಸದಲ್ಲಿರುವ ಚಂಕಿ ಬಳೆಗಳು, ಕೂದಲನ್ನು ಹಾರಾಡಲು ಬಿಟ್ಟು ದಿಗಂತದೆಡೆಗೆ ನೋಟ ನೆಟ್ಟ ಹೆಣ್ಣುಗಳಿರುವ ಬಳೆಗಳು ಸದ್ಯಕ್ಕೆ ಬೊಹೊ ಪ್ರೇಮಿಗಳ ಮುಂಗೈಯನ್ನು ಆವರಿಸಿಕೊಂಡಿವೆ. ಎಲ್ಲವನ್ನೂ ಹಾಗೂ ಎಲ್ಲರನ್ನೂ 'ಪದಭಾರ'ವಿಲ್ಲದೇ ಒಳಗೊಳ್ಳುವುದೇ ಫ್ಯಾಷನ್ ಎಂಬುದು ಎಷ್ಟು ಚಂದದ ಪರಿಕಲ್ಪನೆ ಅಲ್ಲವೇ?

## ಏನಿದು ಬೊಹೆಮಿಯನ್ ಸಂಸ್ಕೃತಿ?

ಬೊಹೆಮಿಯನ್ ಸಂಸ್ಕೃತಿಯು 19ನೇ ಶತಮಾನದಲ್ಲಿ ಫ್ರಾನ್ಸ್‌ನಲ್ಲಿ ಉಗಮವಾಯಿತು. ಬೊಹೆಮಿಯನ್ನರು ಸಾಮಾನ್ಯವಾಗಿ ಅಲೆಮಾರಿ ಜೀವನವನ್ನು ಇಷ್ಟಪಡುತ್ತಾರೆ. ಕಲೆ, ಸಾಹಿತ್ಯ, ಸಂಗೀತ ಮತ್ತು ಇತರೆ ಸೃಜನಶೀಲ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಇಚ್ಛಿಸುತ್ತಾರೆ. ಬೋಹೊ ಶೈಲಿಯು ಮುಕ್ತ ಮತ್ತು ನಿರಾತಂಕ ಅಭಿವ್ಯಕ್ತಿ ಮುದ್ರೆಯನ್ನು ತೋರಿಸುತ್ತದೆ. ■